Repairs to the Channel Leading to Shantigrama Tank in Hassan District.

Q.—454. Sri K. T. DASAPPA (Hassan).—

Will the Government be pleased to state :—

(*a*) whether they are aware that the channel leading to Shantigrama Tank in Hassan District needs substantial repairs ;

(*b*) whether they would prepare estimate for the same and take up the work ?

A.—Sri H. K. VEERANNA GOWDH (Minister for Public Works).—

(*a*) Yes, it needs some improvements.

(*b*) An estimate for Rs. 7,390 was got up and the same was sanctioned on 7th June 1957. The work will be taken up for execution and completed soon.

ಶ್ರೀ ಕೆ. ಟಿ. ದಾಸಪ್ಪ.—ಯಾವಾಗ ಈ ಕೆಲಸವನ್ನು ಪ್ರಾರಂಭಿಸುತ್ತೀರಿ, ಸ್ವಾಮಿ ?

*ಶ್ರೀ ಎಚ್. ಕೆ. ವೀರಣ್ಣ ಗೌಡ.—ಈ ಕೆಲಸದ ಅಂದಾಜು ಈಗ ತಾನೆ ಜೂನ್ 7ನೆಯ ತಾರೀಖು ಮಂಜೂರಾಗಿದೆ, ಕೂಡಲೆ ಪ್ರಾರಂಭಿಸುತ್ತೇವೆ.

Seizure of the Gun and the Licence of Sri Puttiah of Hanbal

Q.—432. Sri B. N. BORANNA GOWDA (Belur).—

Will the Government be pleased to state :—

(*a*) whether it is a fact that a gun licence (belonging to Shri Puttiah of Hanbal) was seized along with the gun in Hanbal, Saklespur taluk ;

(*b*) the reasons assigned when the police seized the gun ;

(*c*) whether it is a fact that the Licence-holder has requested for the return of the seized weapon ;

(*d*) if so, the action taken in the matter ?

A.—Sri C. M. POONACHA (Minister for Home Affairs and Industries).—

(*a*) Yes.

(*b*) For the security of public peace as the licensee was involved in a proceeding under Section 107, Cr.P.C. and also in a case under Section 353, I.P.C.

(*c*) Yes.

(*d*) As the gun was forfeited to Government, Sri Puttiah was intimated on 21st April 1955 that he has no claim over it. The gun was found unserviceable and it was, therefore, destroyed.

ಶ್ರೀ ಬಿ. ಎಚ್. ಬೋರಣ್ಣಗೌಡ.—ಶ್ರೀ ಪುಟ್ಟಯ್ಯನವರ ಮೇಲೆ ಪೋಲೀಸಿನವರು ಹಾಕಿದ್ದ ಕೇಸು ರುಜುವಾತಾಯಿತೆ ?

*ಶ್ರೀ ಸಿ. ಎಂ. ಪೂಣಚ್ಚ.—ಕೇಸನ್ನು ಕೋರ್ಟಿಗೆ ದಾಖಲು ಮಾಡಲಾಯಿತು. ಅದು ಕೋರ್ಟಿನಲ್ಲಿ ಖುಲಾಸೆಯಾಯಿತು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬಂದೂಕ ಜಪ್ತಿ ಮಾಡುವುದೇನೋ ಸರಿ. ಬಂದೂಕು ಲೈಸೆನ್ಸ್ ಏಕೆ ಜಪ್ತಿ ಮಾಡಿದರು ?

ಶ್ರೀ ಸಿ. ಎಂ. ಪೂಣಚ್ಚ.—ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಬಂದೂಕು ಲೈಸೆನ್ಸ್ ಕೊಡುವ ಅಧಿಕಾರಿಗಳು. ಅವರು ತಮ್ಮ ಅಧಿಕಾರದ ದೃಷ್ಟಿಯಿಂದ ಯಾವುದೇ ಒಬ್ಬ ವ್ಯಕ್ತಿಯ ವಿಚಾರದಲ್ಲಿ ನಿರ್ಣಯ ಮಾಡುತ್ತಾರೆ. ಅದರಂತೆ ಅವರ ಅಧಿಕಾರವನ್ನು ಪ್ರಯೋಗಿಸಿ ಈ ಲೈಸೆನ್ಸನ್ನು 1950ರಲ್ಲಿ ರದ್ದು ಮಾಡಿದ್ದಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಜಪ್ತಿ ಮಾಡಿದಿರಿ, ಮಾಡಿದ ಮೇಲೆ ಬಂದೂಕ ಕೊಡಬೇಕೆಂದು ಪದೇ ಪದೇ ಶ್ರೀ ಪುಟ್ಟಯ್ಯನವರು ಅರ್ಜಿ ಹಾಕಿದ್ದು ನಿಜವೆ ?

ಶ್ರೀ ಸಿ. ಎಂ. ಪೂಣಚ್ಚ.—ಬಂದೂಕನ್ನು ಸ್ವಾಧೀನ ಪಡಿಸಿಕೊಂಡ ಮೇಲೆ ಒಂದು ವರ್ಷದೊಳಗಾಗಿ ಯಾವುದೇ ರೀತಿಯಲ್ಲಿ ಅರ್ಜಿ ಕೊಡದಿದ್ದುದರಿಂದ ಸರ್ಕಾರದವರು ಅದನ್ನು ವಶಪಡಿಸಿಕೊಂಡರು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಪದೇ ಪದೇ ಅರ್ಜಿ ಕೊಟ್ಟರೂ ಕೂಡ ಬಂದಿಲ್ಲವೆಂದು ಹೇಳುತ್ತಿರುವುದು ಗಮನಕ್ಕೆ ಬಂದಿಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ರೂಲ್ಸ್ ಪ್ರಕಾರ ಬಂದೂಕ ವಶಪಡಿಸಿಕೊಂಡ ಒಂದು ವರ್ಷದ ಅವಧಿಯಲ್ಲಿ ಹಕ್ಕುದಾರರಿಂದ ಅವರ ಅಕ್ಷೇಪಣೆಗಳೇನಾದರೂ ಇದ್ದರೆ ಅಥವಾ ಕುಂದು ಕೊರತೆಯಿದ್ದರೆ ಅದು ಅರ್ಜಿದಾರರಿಂದ ನಿವೇದಿಸಲ್ಪಡಬೇಕು. ಹಾಗೆ ಮಾಡದಿದ್ದರೆ ಸರ್ಕಾರ ಕಾನೂನು ಪ್ರಕಾರ ಕ್ರಮ ಕೈಕೊಳ್ಳುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಲೈಸೆನ್ಸ್‌ದಾರರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ, ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ತಮ್ಮ ಬಂದೂಕವನ್ನು ಕಿತ್ತುಕೊಂಡು ಹೋಗಿರುವ ವಿಚಾರದಲ್ಲಿ ಒಂದು ವರ್ಷದೊಳಗೆ ಅರ್ಜಿ ಕೊಟ್ಟಿಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ನನ್ನಲ್ಲಿರುವ ದಾಖಲೆ ಪ್ರಕಾರ ಒಂದು ವರ್ಷದೊಳಗೆ ಒಂದು ಅರ್ಜಿಯನ್ನೂ ಸಹ ನಲ್ಲಿಸಿರುವುದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಬಂದೂಕ ಸರಿಯಾದ ಸ್ಥಿತಿಯಲ್ಲಿದ್ದು ಚೆನ್ನಾಗಿ ಉಪಯೋಗಕ್ಕೆ ಬರುವಂತಿದ್ದರೂ ಕೂಡ ಅದನ್ನು ಒಡೆದು ಹಾಕಿರುವುದು ನಿಜವೆ ?